ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 19.09.2024.

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ನಾನು ಶಾಲೆ ಕಲಿತಿಲ್ಲ. ನಮ್ಮ ಕುಟುಂಬದ ಅಡ್ಡ ಹೆಸರು ಪೋಲೀಸ್ ಪಾಟೀಲ್ ಎಂದರೆ ಸರಿ. ನನ್ನ ಪ್ರಕಾರ ಸಾಯಬಣ್ಣ ಮತ್ತು ಅವರ ಮಕ್ಕಳ ಮದ್ಯ ಹಂಚಿಕೆಯಾಗಿರುತ್ತದೆ, ಸದರಿ ಹಂಚಿಕೆ ಮನೆಗೆ ಮಾತ್ರ ಆಗಿರುತ್ತದೆ ಎಂದು ಹೇಳಲು ಬಂದಿರುತ್ತೇನೆ. ಸದರಿ ಮನೆಯ ಹಂಚಿಕೆ ಸುಮಾರು 20 ವರ್ಷ ಮೇಲಾಗಿರುತ್ತದೆ. ಸದರಿ ಹಂಚಿಕೆ ಕಾಲಕ್ಕೆ ನಾನು, ಮುರಗಯ್ಯ ಸ್ವಾ ಮಿ, ಶವಾನಂದ, ಮಲ್ಲಿಕಾರ್ಜುನ, ಶಿವಪುತ್ರಪ್ಪ, ಶಿವಾನಂದ ರವರು ಇದ್ದೇವು. ನನ್ನ ಪ್ರಕಾರ ಮನೆಯದು ಮಾತ್ರ ಹೆಂಚಿಕೆಯಾಗಿರುತ್ತವೆ ಎಂದರೆ, ಸಾಕ್ಷಿ ಹೊಲ, ಮನೆ, ಪಾತ್ರೆ, ಎತ್ತುಗಳು ಎಲ್ಲವು ಹಂಚಿಕೆಯಾಗಿರುತ್ತವೆ ಎಂದು

ನುಡಿಯುತ್ತಾರೆ. ಡಿಡಬ್ಲ್ಯೂ -03 ಮತ್ತು 4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಖಂಡಿಕೆ 5ರಲ್ಲಿ ಜಮೀನುಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಹಂಚಿಕೆಯಾಗಿದೆ, ಮನೆಗಳಲ್ಲಿ ಹಂಚಿಕೆಯಾಗಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಸಾಯಬಣ್ಣನ ಮಗಳು ನಾವು ಹೇಳಿದ ಹೆಂಚಿಕೆ ದಿನದಂದು ಹಾಜರು ಇರಲಿಲ್ಲ. ಸದರಿ ಹಂಚಿಕೆಯಲ್ಲಿ ಬಂಡಮ್ಮನಿಗೆ ಏನು ಕೊಟ್ಟರು ಎಂದು ನನಗೆ ಗೊತ್ತಿಲ್ಲ ಹಾಗೂ ನನ್ನ ಸಮಕ್ಷಮ ಅವರಿಗೆ ಏನನ್ನು ಕೊಟ್ಟಿಲ್ಲ, ಅವಳ ಅಪ್ಪನಿಗೆ ಗೊತ್ತಿರಬೇಕು. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳನ್ನು ನನಗೆ ಓದಿ ಹೇಳಿರುವುದಿಲ್ಲ, ಆದರೆ ವಾಟ್ನಿ ಪತ್ರ ಓದಿ ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ 5ನೇ ಖಂಡಿಕೆಯಲ್ಲಿ ಬಂಡಮ್ಮ ರವರು ತನ್ನ ಹಕ್ಕನ್ನು ತಮ್ಮ ಸಹೋದರರಿಗೆ ಬಿಟ್ಟುಕೊಟ್ಟಿರುತ್ತಾಳೆ ಎಂದು ನಾನು ಹೇಳಿ ಬರೆಯಿಸಿರುವುದಿಲ್ಲ. ಬಂಡಮ್ಮ ಕೂಡಾ ಸದರಿ ವಾಟ್ನಿ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಸಹಿ ಮಾಡಿರುತ್ತಾಳೆ ಎಂದು ನುಡಿಯುತ್ತಾರೆ. ಸಾಯಬಣ್ಣ ಮತ್ತು ಆತನ ಹೆಂಡತಿಯಾಗಿದ ರಾಚಮ್ಮ ರವರಿಗೆ 18 ಎಕರೆ ಜಮೀನು ಸದರಿ ಹಂಚಿಕೆಯಲ್ಲಿ ಕೊಟ್ಟಿರುತ್ತದೆ.

ಸಾಯಬಣ್ಣ ಮತ್ತು ಆತನ ಹೆಂಡತಿ ತಿರಿಕೊಂಡು ನಂತರ ಸದರಿ ಸಂಪೂರ್ಣ 18 ಎಕರೆ ಜಮೀನು ಬಂಡಮ್ಮನಿಗೆ ಹೋಗಬೇಕೆಂದು, ಬರೆದಿದೇಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಅದು ಸಾಯಬಣ್ಣನ ಇಬ್ಬರು ಗಂಡು ಮಕ್ಕಳಿಗೆ ಹೋಗಬೇಕು ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಹಿಂದು ಕಾಯ್ದೆ ಪ್ರಕಾರ ಮಗಳಿಗೂ ಕೂಡಾ ಸಮಪಾಲು ಇದೆ ಎಂದರೆ ಸರಿ. ಬಂಡಮ್ಮನಿಗೆ ಏನು ಕೊಟ್ಟಿರೀ ಎಂದರೆ, ಸಾಕ್ಷಿ 18 ಎಕರೆ ಜಮೀನು ತಂದೆ-ತಾಯಿ ಪಾಲು ಅವಳಿಗೆ ಅಂದರೆ ಬಂಡಮ್ಮನಿಗೆ ಹೋಗಿದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೇ ಹಂಚಿಕೆಯಾಗಿಲ್ಲ ಎಂದರೆ ಸರಿಯಲ್ಲ. ದಾವಾ ಹಾಕಿದ ನಂತರ 4ನೇ ಪ್ರತಿವಾದಿ ಮಾತು ಕೇಳಿ ಸುಳ್ಳು

ದಾಖಲೆ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 19.09.2024.

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ಈ ದಿನ ನಾನು ನನ್ನ ಪ್ರಕಾರ ನ್ಯಾಯಾಲಯಕ್ಕೆ ಸಾಯಬಣ್ಣ ಮತ್ತು ಅವರ ಮಕ್ಕಳ ಮದ್ಯ ಹಂಚಿಕೆಯಾಗಿದೆ ಎಂದು ಹೇಳಲು ಬಂದಿರುತ್ತೇನೆ. ಸದರಿ ಹಂಚಿಕೆಯಾಗಿ 17-18 ವರ್ಷವಾಗಿರುತ್ತದೆ. ಸದರಿ ಹಂಚಿಕೆ ಪತ್ರದ ಮೇಲೆ ನಾನು ಸಹಿ ಮಾಡಿರುತ್ತೇನೆ ಎಂದು ಹೇಳಲು ಬಂದಿರುತ್ತೇನೆ. ಬಂಡಮ್ಮ ರವರು ಸಾಯಬಣ್ಣನ ಮಗಳು ಎಂದರೆ ಸರಿ. ಸದರಿ ಬಂಡಮ್ಮ 5ನೇ ಪ್ರತಿವಾದಿ ಇರುತ್ತಾರೆ. ನಾನು ಹೇಳಿದ ಹಂಚಿಕೆ ಪತ್ರ ಆಗುವ ಕಾಲಕ್ಕೆ ಬಂಡಮ್ಮ ಹಾಜರು ಇರಲಿಲ್ಲ. ಬಂಡಮ್ಮ ರವರಿಗೆ ಜಮೀನುಗಳಲ್ಲಿ ಮತ್ತು ಮನೆಗಳಲ್ಲಿ ಯಾವುದೇ ಹಿಸ್ಸೆ ಕೊಟ್ಟಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ 5ನೇ ಖಂಡಿಕೆಯಲ್ಲಿ ಬಂಡಮ್ಮ ರವರು ತನ್ನ ಹಕ್ಕನ್ನು ತಮ್ಮ ಸಹೋದರರಿಗೆ ಬಿಟ್ಟುಕೊಟ್ಟಿರುತ್ತಾಳೆ ಎಂದು ನಾನುಎ ಹೇಳಿ ಬರೆಯಿಸಿರುವುದಿಲ್ಲ. ಕಾನೂನು ಪ್ರಕಾರ ಒಬ್ಬ ಹೆಣ್ಣು ಮಗಳಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಅಣ್ಣ-ತಮ್ಮಂದಿರು ಕೊಟ್ಟರೆ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಬಿಡಬೇಕು ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೆ ಹಂಚಿಕೆಯಾಗಿರಲ್ಲ ಎಂದರೆ ಸರಿಯಲ್ಲ. ಸಾಯಬಣ್ಣ ತಿರಿಕೊಂಡ ನಂತರ ನಾವೆಲ್ಲರು ಸೇರಿ ಸುಳ್ಳು ಕಾಗದವನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವೇನಾದರೂ ವಾಟ್ನಿ ಪತ್ರ ಬರೆದಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಬರೆದಿಲ್ಲ ಊರಿನವರು ವಾಟ್ನಿ ಪತ್ರ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 19.09.2024.

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ನನ್ನ ಸಮಕ್ಷಮ ಜಮೀನು ಮತ್ತು ಮನೆಗಳ ವಾಟ್ನಿಯಾಗಿದ್ದರ ಬಗ್ಗೆ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಸದರಿ ವಾಟ್ನಿಯಾಗಿ ಸುಮಾರು 15 ವರ್ಷ ಮೇಲಾಗಿರುತ್ತದೆ. ನಾನು ಹೇಳಿದ ದಿನದಂದೇ ಅದನ್ನು ತಯಾರಿಸಿರುತ್ತಾರೆ ಹಾಗೂ ನನ್ನ ಪ್ರಕಾರ ಅದೇ ದಿನ ನಾನು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ಸಾಯಬಣ್ಣ ರವರಿಗೆ ಒಬ್ಬ ಹೆಣ್ಣು ಮಗಳು ಇದ್ದಳು, ಅವಳ ಹೆಸರು ಬಂಡಮ್ಮ ಇರುತ್ತದೆ. ನಾನು ಹೇಳಿದಂತೆ ಹಂಚಿಕೆಯಾಗುವ ಕಾಲಕ್ಕೆ ಸದರಿ ಬಂಡಮ್ಮ ಹಾಜರು ಇರಲಿಲ್ಲ. ಬಂಡಮ್ಮ ನನ್ನ ಸಮಕ್ಷಮ ತನ್ನ ಹಕ್ಕನ್ನು ಬಿಟ್ಟು ಬಿಡುತ್ತೇನೆ ಎಂದು ಎಲ್ಲಿಯು ಹೇಳಿಲ್ಲ,

ಏಕೆಂದರೆ ಅವಳು ಆ ಕಾಲಕ್ಕೆ ಹಾಜರು ಇರಲಿಲ್ಲ. ವಾಟ್ನಿ ಕಾಲಕ್ಕೆ ಮೂರು ಜನರ ಮಾತ್ರ ಹಂಚಿಕೆಕೊಂಡಿರತ್ತಾರೆ, ಅವರೇಂದರೆ, ಸಾಯಬಣ್ಣ ಹಾಗೂ ಅವರಿಬ್ಬರ ಮಕ್ಕಳಾದ, ಅಂಬರಾಯ ಮತ್ತು ಶಿವಾನಂದ ರವರು ಹಂಚಿಕೊಂಡಿರುತ್ತಾರೆ, ಬಂಡಮ್ಮನಿಗೆ ಏನುಕೊಟ್ಟಿರುವುದಿಲ್ಲ.

ನಾನು 7ನೇ ತರಗತಿವರೆಗೆ ಶಿಕ್ಷಣ ಪೂರೈಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ಆಂಗ್ಲ ಭಾಷೆಯಲ್ಲಿ ಇವೆ ಮತ್ತು ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ, ಸಾಕ್ಷಿ ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 5ರಲ್ಲಿ ಬಂಡಮ್ಮ ತನ್ನ ಹಕ್ಕನ್ನು ತನ್ನ ಇಬ್ಬರು ಸಹೋದರರಿಗೆ ಬಿಟ್ಟುಕೊಟ್ಟಿರುತ್ತಾಳೆ ಎಂದು ನಾನು ಹೇಳಿ ಬರೆಯಿಸಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಪತ್ರ ವಾಟ್ನಿ ಪತ್ರ ಆಗಿರುತ್ತದೆ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಹಂಳಿಕೆ ಪತ್ರ ಆಗಿರುವುದಿಲ್ಲ ಹಾಗೂ ಸಾಯಬಣ್ಣ ಇರುವವರೆಗೂ ಅವರ ಮಕ್ಕಳ ಮಧ್ಯ ಯಾವುದೇ ಹಂಚಿಕೆ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ ಹಾಗೂ ನಾನು ಹೇಳುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ, ಇವತ್ತಿನವರೆಗೂ ಬಂಡಮ್ಮ ಮತ್ತು ಅವಳ ಸಹೋದರರ ಮಧ್ಯ ಯಾವುದೇ ಹಂಚಿಕೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ಹಿಂದು ಕಾಯ್ದೆ ಪ್ರಕಾರ ಒಬ್ಬ ಹೆಣ್ಣು ಮಗಳಿಗೆ ಸಮನಾದ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ನಮ್ಮ ವ್ಯವಹಾರದ ಪ್ರಕಾರ ನಾವು ಕೊಡುವುದಿಲ್ಲ. ನಾನು ಹೇಳಿದಂತೆ ಹಂಚಿಕೆಯಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**